ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಸಹನಿರ್ದೇಶಕರ ಕಛೇರಿ ಮ.ಉ.ಯೋ, ಕೆ.ಜಿ.ರಸ್ತೆ , ಬೆಂಗಳೂರು – 2**

ಸಂಖ್ಯೆ:ಎಂ:6/ಅ.ದಾ./ಅನುದಾನ:1/2010–11 ದಿನಾಂಕ:12–11–2010

**ಸುತ್ತೋಲೆ**

**ವಿಷಯ:** ಮಧ್ಯಾಹ್ನ ಉಪಹಾರ ಯೋಜನೆಯಡಿ ಅಡುಗೆ ತಯಾರಿಕಾ ವೆಚ್ಚ ಹೆಚ್ಚಿಸುವ ಮತ್ತು ಹೆಚ್ಚುವರಿ ಅಡುಗೆ ಸಿಬ್ಬಂದಿಯನ್ನು ನೇಮಕಾತಿ ಮಾಡುವ ಬಗ್ಗೆ.

**ಉಲ್ಲೇಖ:** ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:F-1-1/2009-Desk(MDM), ದಿನಾಂಕ:24.11.2009.

2. ಸರ್ಕಾರದ ಆದೇಶ ಸಂಖ್ಯೆ:ಇಡಿ–96/ಎಂ.ಎಂ.ಎಸ್–2010, ದಿನಾಂಕ:10–11–2010.

* * * * *

ಕೇಂದ್ರ ಸರ್ಕಾರದ ದಿನಾಂಕ : 24–11–2009ರ ಪತ್ರದಲ್ಲಿ ತಿಳಿಸಿರುವಂತೆ ಮಧ್ಯಾಹ್ನ ಉಪಹಾರ ಯೋಜನೆಯಡಿ ಹಾಲಿ ಇರುವ ಅಡುಗೆ ತಯಾರಿಕಾ ವೆಚ್ಚವನ್ನು 2010–11ನೇ ಸಾಲಿನಲ್ಲಿ ತನ್ನ ಪಾಲನ್ನು ಶೇಕಡಾ 7.5ರಷ್ಟು ಹೆಚ್ಚಿಸಿ ಆಯವ್ಯಯದಲ್ಲಿ ಅನುದಾನ ಬಿಡುಗಡೆ ಮಾಡಿರುತ್ತದೆ ಮತ್ತು ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಅಡುಗೆ ಕೇಂದ್ರಗಳಲ್ಲಿ ಅಡುಗೆ ಸಿಬ್ಬಂದಿಯನ್ನು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ನೇಮಕ ಮಾಡಲು ಉಲ್ಲೇಖ (1) ರ ಪತ್ರದಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಆದೇಶಿಸಿರುತ್ತದೆ ಇದಕ್ಕಾಗಿ ತನ್ನ ಪಾಲಿನ 75% ಅನುದಾನವನ್ನು ಸಹ ಬಿಡುಗಡೆ ಮಾಡಿರುತ್ತದೆ.

ಅದರಂತೆ ಉಲ್ಲೇಖ (2)ರ ರಾಜ್ಯ ಸರ್ಕಾರವು ಅಡುಗೆ ತಯಾರಿಕಾ ವೆಚ್ಚವನ್ನು ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ತರಗತಿ 1–5, ತರಗತಿ 6–8 ಹಾಗೂ ತರಗತಿ 9–10ಕ್ಕೆ ಪ್ರತ್ಯೇಕವಾಗಿ ಅಡುಗೆ ತಯಾರಿಕಾ ವೆಚ್ಚವನ್ನು ಪರಿಷ್ಕರಿಸಿದೆ. ಪರಿಷ್ಕೃತ ಅಡುಗೆ ತಯಾರಿಕಾ ವೆಚ್ಚವನ್ನು ಅನುದಾನಿತ ಶಾಲೆಗಳಿಗೆ ಹಾಗೂ ಕಾರ್ಯಕ್ರಮದಲ್ಲಿ ಭಾಗಿಯಾಗಿರುವ ಸ್ವಯಂ ಸೇವಾ ಸಂಸ್ಥೆಗಳಿಗೂ ಸಹ ಅನ್ವಯಿಸುತ್ತದೆ.

**ಪರಿಷ್ಕೃತ ಅಡುಗೆ ತಯಾರಿಕಾ ವೆಚ್ಚದ ವಿವರ ಕೆಳಕಂಡಂತಿದೆ.**

| ಕ್ರ.ಸಂ. | ಆಹಾರ ಪದಾರ್ಥ | ತರಗತಿ 1 ರಿಂದ 5 | | ತರಗತಿ 6 ರಿಂದ 8 | | ತರಗತಿ 9 ರಿಂದ 10 | |
|---|---|---|---|---|---|---|---|
| | | ಪ್ರಮಾಣ (ಗ್ರಾಂಗಳಲ್ಲಿ) | ಅಡುಗೆ ತಯಾರಿಕಾ ವೆಚ್ಚ | ಪ್ರಮಾಣ (ಗ್ರಾಂಗಳಲ್ಲಿ) | ಅಡುಗೆ ತಯಾರಿಕಾ ವೆಚ್ಚ | ಪ್ರಮಾಣ (ಗ್ರಾಂಗಳಲ್ಲಿ) | ಅಡುಗೆ ತಯಾರಿಕಾ ವೆಚ್ಚ |
| 1 | ಅಕ್ಕಿ | 100 | ಉಚಿತ | 150 | ಉಚಿತ | 150 | 1.40 |
| 2 | ಬೇಳೆ | 20 | 1.22 | 30 | 1.83 | 30 | 1.83 |
| 3 | ತರಕಾರಿ | 50 | 0.65 | 75 | 0.97 | 75 | 0.97 |
| 4 | ಎಣ್ಣೆ | 05 | 0.27 | 7.5 | 0.41 | 7.5 | 0.41 |
| 5 | ಉಪ್ಪು | 02 | 0.02 | 4 | 0.04 | 4 | 0.04 |
| 6 | ಅಡುಗೆ ಅನಿಲ | – | 0.52 | – | 0.77 | – | 0.77 |
| 7 | ಸಾಗಾಣಿಕಾ ವೆಚ್ಚ | – | 0.01 | – | 0.01 | – | 0.01 |
| | **ಒಟ್ಟು** | | **2.69** | | **4.03** | | **5.43** |

**ಅಡುಗೆಯವರ ನೇಮಕಾತಿ :-**

ಸರ್ಕಾರಿ, ಅನುದಾನಿತ ಪ್ರಾಥಮಿಕ ಶಾಲಾ ಮತ್ತು ಪ್ರೌಢ ಶಾಲೆಗಳಲ್ಲಿ ಉಲ್ಲೇಖ(2) ರ ಸರ್ಕಾರದ ಆದೇಶದನ್ವಯ ಈ ಕೆಳಕಂಡಂತೆ ನೇಮಕ ಮಾಡಿಕೊಳ್ಳುವುದು. ಒಂದು ಅಡುಗೆ ಕೇಂದ್ರಕ್ಕೆ ಬೇರೆ ಶಾಲೆಗಳು ಟ್ಯಾಗ್ ಆಗಿದ್ದಲ್ಲಿ ಅಂತಹ ಶಾಲೆಗಳಲ್ಲಿಯೂ ಸಹ ಇದೇ ರೀತಿ ಅಡುಗೆಯವರ ನೇಮಕ ಮಾಡಿಕೊಳ್ಳುವುದು.

| ಕ್ರ.ಸಂ | ಪ್ರಾಥಮಿಕ ಶಾಲಾ ಮತ್ತು ಪ್ರೌಢ ಶಾಲಾ ವಿಭಾಗ | | |
|---|---|---|---|
| | ಮಕ್ಕಳ ಸಂಖ್ಯೆ | ಕೇಂದ್ರದ ಮಾದರಿ | ಅಡುಗೆಯವರ ಸಂಖ್ಯೆ |
| 1 | 1 ರಿಂದ 25ರವರೆಗೆ | ಎ | 1 |
| 2 | 26 ರಿಂದ 100ರವರೆಗೆ | ಬಿ | 2 |
| 3 | 101 ರಿಂದ 200ರವರೆಗೆ | ಸಿ | 3 |
| 4 | 201 ರಿಂದ 300ರವರೆಗೆ | ಡಿ | 4 |
| 5 | 301 ರಿಂದ 500ರವರೆಗೆ | ಇ | 5 |
| 6 | 501 ರಿಂದ 800ರವರೆಗೆ | ಎಫ್ | 6 |
| 7 | 801 ರಿಂದ 1100ರವರೆಗೆ | ಜಿ | 7 |
| 8 | 1101 ರಿಂದ 1400ರವರೆಗೆ | ಹೆಚ್ | 8 |
| 9 | 1400 ರಿಂದ 1700ರವರೆಗೆ | ಐ | 9 |
| 10 | 1701 ರಿಂದ ಮೇಲ್ಪಟ್ಟು | ಜೆ | 10 |

ಮಧ್ಯಾಹ್ನ ಉಪಹಾರ ಯೋಜನೆಯ ಪ್ರತಿ ಅಡುಗೆ ಕೇಂದ್ರಗಳಲ್ಲಿ ಒಬ್ಬರು ಮುಖ್ಯ ಅಡುಗೆಯವರು ಮತ್ತು ಉಳಿದವರನ್ನು ಅಡುಗೆಯವರೆಂದು ಚಾಲ್ತಿಯಲ್ಲಿರುವ ಮೀಸಲಾತಿ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದು. ಮುಖ್ಯ ಅಡುಗೆಯವರು ಆಹಾರ ದಾಸ್ತಾನನ್ನು ತೆಗೆದುಕೊಳ್ಳುವುದು, ಲೆಕ್ಕ ಪತ್ರಗಳ ನಿರ್ವಹಣೆ ಬಗ್ಗೆ ವಹಿಗಳನ್ನು ನಿರ್ವಹಿಸಬೇಕಾಗುವುದರಿಂದ ಅವರಿಗೆ ರೂ 1100/- ಪ್ರತಿ ಮಾಹೆ ಗೌರವಧನ ಮತ್ತು ಉಳಿದ ಅಡುಗೆಯವರಿಗೆ ರೂ 1000/- ಪ್ರತಿ ಮಾಹೆ ಪಾವತಿಸುವುದು.

(ಎ.ದೇವಪ್ರಕಾಶ್)
ಸಹನಿರ್ದೇಶಕರು(ಮ.ಉ.ಯೋ)

**ಪ್ರತಿಯನ್ನು :**

1. ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಛೇರಿ, ಇವರಿಗೆ ಮಾಹಿತಿಗೆ ಹಾಗೂ ಸೂಕ್ತ ಕ್ರಮಕ್ಕಾಗಿ
2. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮಾಹಿತಿಗೆ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಎಲ್ಲಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ಮಾಹಿತಿಗೆ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ
4. ಎಲ್ಲಾ ಶಿಕ್ಷಣಾಧಿಕಾರಿಗಳು(ಅ.ದಾ) ಇವರು ತಮ್ಮ ಅಧೀನ ಕಛೇರಿಗೆ ಮಾಹಿತಿಯನ್ನು ನೀಡಿ ಅನುಷ್ಠಾನ ಮಾಡಲು ಸೂಚಿಸಿದೆ.
5. ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯತ್, ಇವರು ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳಿಗೆ ಸುತ್ತೋಲೆಯನ್ನು ನೀಡಿ ಅನುಷ್ಠಾನ ಮಾಡಲು ಸೂಚಿಸಿದೆ.